7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು:– ವಿಶ್ವವಿದ್ಯಾಲಯ...

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು):– ವಿಶ್ವವಿದ್ಯಾಲಯದ್ದು ಇನ್ನೂ ಉತ್ತರ ಬಂದಿಲ್ಲ. ಉತ್ತರವನ್ನು ಒದಗಿಸುತ್ತೇನೆ.

ಅಧ್ಯಕ್ಷರು:– ಆಯಿತು. ಬಿ.ವೈ. ರಾಘವೇಂದ್ರ.

1. ವಿಷಯ: ರೈತರ ಸರಣಿ ಸಾವಿನ ಬಗ್ಗೆ

ಶ್ರೀ ಬಿ.ವೈ. ರಾಘವೇಂದ್ರ (ಶಿಕಾರಿಪುರ):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರಣಿ ರೈತರ ಸಾವಿನ ಬಗ್ಗೆ ಕಳೆದ ಒಂದು ವಾರದಿಂದ ಸಾಕಷ್ಟು ವಿಷಯಗಳು ಚರ್ಚೆ ಆಗಿದೆ. ಸಾವು ಅದಂಥವರಿಗೆ ಎ.ಸಿ. ಮಟ್ಟದಲ್ಲಿ ಕಮಿಟಿ ಇದೆ. ಅದರ ಮೂಲಕ ಸರ್ಕಾರದಿಂದ ಪರಿಹಾರ ಕೊಡುವಂಥ ಪ್ರಯತ್ನಗಳು ಆಗುತ್ತಿವೆ. ಆದರೆ, ಇಲ್ಲಿ ಏನಾಗುತ್ತಿದೆ ಎಂದರೆ, ಆತ್ಮಹತ್ಯೆಗೆ ಪ್ರಯತ್ನ ಮಾಡಿ, ಈ ಕಡೆ ದೇವರ ದಯೆಯಿಂದ ತೀರಿಕೊಂಡಿಲ್ಲ. ಬದುಕಿದ್ದಾನೆ.

ಅಧ್ಯಕ್ಷರು:– ಈಗ ತಾವು ಅದನ್ನು ಏತಕ್ಕೆ ಕೇಳಿದ್ದೀರಿ?

ಶ್ರೀ ಬಿ.ವೈ. ರಾಘವೇಂದ್ರ:– ಮಾನ್ಯ ಅಧ್ಯಕ್ಷರೆ, ಅದನ್ನೇ ಕೇಳಿರುವುದು.

ಅಧ್ಯಕ್ಷರು:– ಮಾನ್ಯ ಸಚಿವರನ್ನು ಕೇಳಿ.

ಶ್ರೀ ಬಿ.ವೈ. ರಾಘವೇಂದ್ರ:– ಮಾನ್ಯ ಅಧ್ಯಕ್ಷರೆ, ಅವರು ಆತ್ಮಹತ್ಯೆಗೆ ಪ್ರಯತ್ನ ಮಾಡಿ ಮೈ, ಕೈ ಸುಟ್ಟುಕೊಂಡು ಮನೆಗೂ ಭಾರ, ಸಮಾಜಕ್ಕೂ ಭಾರವಾಗಿ ಪಾಪ ಆ ರೈತ, ಈಗ ಉಳಿದುಕೊಂಡಿದ್ದಾನೆ. ನಮ್ಮ ಶಿವಮೊಗ್ಗದ ಒಂದು ಗ್ರಾಮದಲ್ಲಿ ಮೊನ್ನೆ ದಿವಸ ಇಬ್ಬರು ವಿಷ ಕುಡಿದು ಆತ್ಮಹತ್ಯೆಗೆ ಪ್ರಯತ್ನ ಮಾಡಿದರು. ಅವರು ಬದುಕಿದ್ದಾರೆ. ಅಂಥವರಿಗೆ ಪರಿಹಾರ